**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿಃ 07.07.2026.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ ಆರ್ ಎನ್ ಕೆ ವಕೀಲರಿಂದ**

2016 ರಿಂದ ನನಗೆ ಪಿರ್ಯಾದುದಾರರ ಪರಿಚಯ ಇದೆ. 2016ಕ್ಕಿಂತ ಮೊದಲು ಅವರ ಪರಿಚಯ ಇಲ್ಲದೇ ಇರುವುದರಿಂದ ನನಗೆ ಅವರ ಪರಿಚಯ ಇಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ನಮ್ಮ ಊರಿನಿಂದ ಪಿರ್ಯಾದುದಾರರ ಊರು 4-5 ಕಿ.ಮೀಟರ್ ದೂರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. 2016 ರಿಂದ ಇಲ್ಲಿಯವರೆಗು ಗ್ರಾಮ ಪಂಚಾಯತಿಯಲ್ಲಿ ಅಂಗವಿಕಲ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ಮೊದಲಿಗೆ ಆನಂದ ವಕೀಲರು ನನ್ನಪರವಾಗಿ ಹಾಜರಾಗುತ್ತಿದ್ದರು. ಈಗ ಬೇರೆಯವರನ್ನು ನೇಮಿಸಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿ ಮತ್ತು ಪಿರ್ಯಾದುದಾರರು ಸಲ್ಲಿಸಿರುವಂತಹ ಜಂಟಿ ರಾಜಿ ಅರ್ಜಿಯಲ್ಲಿ ಸಾಕ್ಷಿದಾರರು ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದಲ್ಲಿ ವಕೀಲರ ಸಮಕ್ಷಮ ಪಿರ್ಯಾದುದಾರರೊಂದಿಗೆ ನೀವು ರಾಜಿ ಮಾಡಿಕೊಂಡು ರಾಜಿ ಅರ್ಜಿಗೆ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುರೆದು ನನ್ನ ವಕೀಲರು ಮತ್ತು ಪಿರ್ಯಾದುದಾರರ ವಕೀಲರು ಮತ್ತು ಪಿರ್ಯಾದುದಾರರು ಸೇರಿ 4 ಜನ ಗೂಂಡಾಗಳನ್ನು ಕರೆದುಕೊಂಡು ಬಂದು ಒತ್ತಾಯ ಪೂರಕವಾಗಿ ನನಗೆ ಜಂಟಿ ರಾಜಿ ಅರ್ಜಿಗೆ ಸಹಿ ಮಾಡಿಸಿದ್ದು, ಸದರಿ ವಿಚಾರವನ್ನು ಅದೇ ದಿನ ನ್ಯಾಯಾಲಯದ ಗಮನಕ್ಕೂ ತಂದಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಪಿರ್ಯಾದುದಾರರ ಹೆಸರು ಇಲ್ಲ. ಸದರಿ ಚೆಕ್ ನನ್ನ ಖಾತೆಯಿಂದ ಡ್ರಾ ಆಗಿರುತ್ತದೆ. ಪಿರ್ಯಾದಿ ಹೆಸರಿಗೆ ಚೆಕ್ ಡ್ರಾ ಆಗಿರುತ್ತದೆ, ಅದರೆ ಅವರ ಹೆಸರು ನಮೂದಾಗಿರುವುದಿಲ್ಲ. ಚೆಕ್ ಮೇಲೆ ಹೆಸರು ಬರೆದಿದ್ದರೆ ಮಾತ್ರ ಅವರ ಹೆಸರು ಬರುತ್ತದೆ. ಪಿರ್ಯಾದುದಾರರಿಗೆ ಸದರಿ ಚೆಕ್ ನ್ನು ನೀಡಿರುವುದಿಲ್ಲ ಬದಲಾಗಿ ನನ್ನ ಅನುಕೂಲಕ್ಕೆತಕ್ಕಂತೆ ದಾಖಲಾತಿಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1ಕ್ಕೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2018 ರಲ್ಲಿ ನಾನು ಪಿರ್ಯಾದುದಾರರಿಂದ 2 ಲಕ್ಷ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಅದರ ಮರುಪಾವತಿಗಾಗಿ ನಾನು ನಿಪಿ.1 ರ ಚೆಕ್ ನ್ನು 2019 ರಲ್ಲಿ ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 07.03.2019 ರಲ್ಲಿ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಬ್ಯಾಂಕ್ ನಿಂದ ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು 2017ರ ನಂತರ ನಾನು ಯಾವುದೇ

ಚೆಕ್ ವ್ಯವಹಾರ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 27.03.2019 ರಲ್ಲಿ ನನಗೆ ಪಿರ್ಯಾದುದಾರರು ನೋಟೀಸು ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್ ನ್ನು ಸ್ವೀಕರಿಸಿದ ನಂತರ ನೀವು ಮರುಉತ್ತರ ಕೊಟ್ಟಿದ್ದೀರ ಎಂದರೆ ಸಾಕ್ಷಿದಾರರು ಮರುಉತ್ತರ ಕೊಡುವುದು ಬೇಡವೇ ಬೇಡ, ನಾನು ಪ್ರಕರಣ ದಾಖಲಿಸುವುದಿಲ್ಲ ಎಂದು ಪಿರ್ಯಾದುದಾರರು ಹೇಳಿದ್ದರಿಂದ ಮರುಉತ್ತರ ನೀಡಿರುವುದಿಲ್ಲ. ನಿಪಿ.1 ನನ್ನ ಖಾತೆಗೆ ಸಂಬಂದಪಟ್ಟ ಚೆಕ್ ಮತ್ತು ಅದರಲ್ಲಿರುವ ಸಹಿ ನನ್ನದೇ ಎಂದರೆ ಸರಿ. ಪಿರ್ಯಾದುದಾರಿಂದ ಸಾಲ ಪಡೆದು ಅದರ ಮರುಪಾವತಿಗಾಗಿ ನಿಪಿ.1 ನ್ನು ನೀಡಿದ್ದರಿಂದ ಅದರ ಮರುಪಾವತಿಗೆ ನಾನು ಬದ್ದನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವಂತಹ ದಾಖಲೆಗೂ ಪ್ರಕರಣಕ್ಕೂ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಿಡಿ.1 ರಿಂದ 5 ನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರಿಗೆ ಚೆಕ್ ಹಣವನ್ನು ಪಾವತಿಸಲು ಬದ್ದನಾಗಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ನ್ನು ಹಿಂದಿರುಗಿಸಲು ನೋಟೀಸ್ ನ್ನು ನೀಡಿರುವುದಿಲ್ಲ. ನನ್ನ ಮೇಲೆ ಯಾವುದೇ ಚೆಕ್ ಅಮಾನ್ಯ ಪ್ರಕರಣಗಳು ಇಲ್ಲ, ಸಿವಿಲ್ ಕೇಸ್ ದಾಖಲಾಗಿದೆ. ಸದರಿ ಸಿವಿಲ್ ಕೇಸ್ ನಲ್ಲಿ ನಾನು ನ್ಯಾಯಾಂಗ ಬಂಧನಕ್ಕೆ ಹೋಗಿರುತ್ತೇನೆ. ಆದರೆ ಈಗ ಸದರಿ ದಾವೆ ಇತ್ಯಾರ್ಥವಾಗಿರುತ್ತದೆ. ಸದರಿ ದಾವೆ ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದರೆಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**